ಸಾಕ್ಷಿಯ ಹೆಸರು : ಆಸಿಫ್ ಅಲಿ ಅಬ್ದುಲ್ ಗಫಾರ್

**ದಿನಾಂಕಃ 22-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-**

7. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ಪೊಲೀಸರು ಘಟನಾ ಸ್ಥಳದ ರಸ್ತೆಯ ಯಾವ ದಿಕ್ಕಿಗೆ ರಕ್ತ ಮಿಶ್ರಿತ ಮಣ್ಣನ್ನು ಜಪ್ತುಪಡಿಸಿಕೊಂಡರು ಎಂದರೆ ಸಾಕ್ಷಿಯು ಚಾಸಾ-14 ಹಾಗೂ ಆರೋಪಿಯ ಮನೆಯ ಮುಂದುಗಡೆಯ ರಸ್ತೆಯ ಮಧ್ಯದಲ್ಲಿ ಜಪ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ಘಟನಾ ಸ್ಥಳದಿಂದ ಯಾವುದೇ ರಕ್ತ ಮಿಶ್ರಿತ ಮಣ್ಣನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಎಂ.ಓ-6 ಚಪ್ಪಲಿಯ ನಂಬರು ನನಗೆ ಹೇಳಲು ಬರುವುದಿಲ್ಲ. ನಿಪಿ-32 ರಲ್ಲಿ ಕಾಡು ಪ್ರದೇಶ ಎಂದು ತೋರಿಸಿರುವ ಜಾಗವು ಸ್ಮಶಾನ ಜಾಗವಾಗಿರುತ್ತದೆ ಎಂದರೆ ಸಾಕ್ಷಿಯು ಸ್ಮಶಾನದ ಜಾಗವೂ ಹೌದು ಹಾಗೂ ಅದು ದಟ್ಟ ಕಾಡಿನಿಂದ ಸಹ ಕೂಡಿರುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮುರಿದ ಕನ್ನಡಕ ಹಾಗೂ ಬಡಿಗೆ ಸ್ಮಶಾನದಲ್ಲಿ ಬಿಸಾಡಿದ ವಸ್ತುಗಳು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳ ಮೇಲಿರುವ ಸಹಿಗಳು ನನ್ನದಲ್ಲ ಎಂದರೆ ಸರಿಯಲ್ಲ.

8. ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಎಂ.ಓ-9 ಶರ್ಟಿನ, ಎಂ.ಓ-10 ನಿಕ್ಕರ್ ಇವುಗಳ ಸೈಜ್ ಮತ್ತು ಯಾವ ಕಂಪನಿಯದ್ದು ಎಂದು ಹೇಳಲು ಬರುವುದಿಲ್ಲ. ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಎಂ.ಓ-8 ಲುಂಗಿ, 9 ಮತ್ತು 10 ಸ್ಮಶಾನದಲ್ಲಿ ಜಪ್ತುಪಡಿಸಿಕೊಂಡ ವಸ್ತುಗಳಾಗಿವೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.**

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ.